# ಸಂಸ್ಕೃತಿ ಸೌರಭ

ಡಾ. ವಿ. ವಿಜಯಮ್ಮ



Scanned by CamScanner

ವಿ. ವಿಜಯಮ್ಮ
21/04/201

# ಸಂಸ್ಕೃತಿ ಸೌರಭ

ಸಂಪಾದಕರು

ಡಾ. ವಿ. ವಿಜಯಮ್ಮ

ರಚನ ಪ್ರಕಾಶನ
# 791/5, 25/7ನೇ ಕ್ರಾಸ್,
ಹೆಬ್ಬಾಳ್ 2ನೇ ಹಂತ, ಮೈಸೂರು–570017

Scanned by CamScanner

SAMSKRUTI SOURABA-Collected by Dr. V. Vijayamma, Lecturer in Kannada, Yuvaraja's College, University of Mysore, Mysore. Published by Rachana Prakashana, # 791/5, 25/7th Cross, Hebbal 2nd Stage, Mysore - 570017.

ISBN 978-93-85120-02-2

First Impression : 2014

© : Author

Copies : 1000

Page : x+234=244

Price : ₹ 185

Paper used : 70 gsm Maplitho

D.T.P. : Meenasures T.K. Layout, Mysore

Cover Page Design : Kiran

Printed at : Tara Prints, Mysore

Scanned by CamScanner

# ಪರಿವಿಡಿ


| | | |
|---|---|---|
| ೧ | ಉಡುಪಿ ಜಿಲ್ಲೆಯ ಸಾಂಸ್ಕೃತಿಕ ನೋಟ<br>ಕೆ. ಪ್ರಹ್ಲಾದ | ೧ |
| ೨ | ಕಂಬಿ ಐದೇಶಿ<br>ಡಾ. ವಿಜಯಕುಮಾರಿ ಕರಿಕಲ್ | ೧೫ |
| ೩ | ಕರ್ನಾಟಕದ ಸ್ಥಳನಾಮಗಳು<br>ಡಾ. ಎನ್. ಕುಮುದ | ೨೨ |
| ೪ | ಕರುನಾಡಿನ ದಿಟ್ಟ ನಾರಿಯರು<br>ಡಾ. ವಿ. ವಿಜಯಮ್ಮ | ೩೪ |
| ೫ | ಕಾಕನಕೋಟೆ ನಾಟಕ : ಸಾಂಸ್ಕೃತಿಕ ನೋಟ<br>ಡಾ. ಜಿ. ಶ್ರೀನಿವಾಸ | ೪೩ |
| ೬ | ಕಾಡುಗೊಲ್ಲರ 'ಯುಗಾದಿ ಹಬ್ಬ'– ಒಂದು ನೋಟ<br>ಡಾ. ಕೆ. ತಿಮ್ಮಯ್ಯ | ೫೦ |
| ೭ | ಕೆಲವು ಬುಡಕಟ್ಟುಗಳಲ್ಲಿಯ ವ್ಯಕ್ತಿನಾಮಗಳು<br>ಪ್ರೊ. ಆರ್. ರಾಮಕೃಷ್ಣ | ೬೦ |
| ೮ | ಗ್ರಾಮೀಣ ವೃತ್ತಿಗಳು: ಪರಂಪರೆ ಮತ್ತು ಆಧುನಿಕತೆ<br>ಡಾ. ನಂಜಯ್ಯ ಹೊಂಗನೂರು | ೭೪ |
| ೯ | ಗೊಲ್ಲರ ವ್ಯಕ್ತಿನಾಮಗಳು<br>ಡಾ. ವಿ. ವಿಜಯಮ್ಮ | ೮೮ |
| ೧೦ | ಪ್ರತಿಭಾ ಪರಂಪರೆ ಮತ್ತು ಸಂಸ್ಕೃತಿ ಸೌಂದರ್ಯ<br>ಡಾ. ಕೆ. ಸೌಭಾಗ್ಯವತಿ | ೯೯ |


Scanned by CamScanner

# ಕಂಬಿ ಐದೇಶಿ

ಡಾ. ವಿಜಯಕುಮಾರಿ ಕರಿಕಲ್

ವಿಜಾಪುರ ಜಿಲ್ಲೆ ಬಹಳ ಪ್ರಾಚೀನ ಕಾಲದಿಂದಲೂ ಬಹುಸಂಸ್ಕೃತಿ ಬಹುಧರ್ಮಗಳ ಆಡುಂಬೊಲವಾಗಿದೆ. ಶೈವ, ವೈಷ್ಣವ, ಜೈನ, ವೈದಿಕ ಮತ್ತು ಇಸ್ಲಾಂ ಧರ್ಮಗಳ ನೆಲೆಬೀಡು. ಅದರ ಸೂಚಕವಾಗಿ ಮಠಗಳು ಮಂದಿರಗಳು ಮಸೀದಿಗಳು ಇಲ್ಲಿವೆ. ಇವೆಲ್ಲ ಧಾರ್ಮಿಕ ಶ್ರದ್ಧಾ ಕೇಂದ್ರಗಳು. ಜನಸಾಮಾನ್ಯರು ನೇರವಾಗಿ ಪಾಲ್ಗೊಂಡು ನೆರವೇರಿಸಲು ಒಂದು ವಿಧಿಯಾಗಿ ಕಂಬಿ ಐದೇಶಿಯು ಕಾಲಾನುಕಾಲದಿಂದ ರೂಢಿಯಲ್ಲಿದೆ. ಈ ಆಚರಣೆಯನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

'ಕಂಬಿ ಐದೇಶಿ' ಉತ್ಸವ ಏಪ್ರಿಲ್ ತಿಂಗಳ ಉತ್ತರಾರ್ಧ ಮೇ ತಿಂಗಳ ಪೂರ್ವಾರ್ಧದಲ್ಲಿ ಬರುವ ದವನದ ಹುಣ್ಣಿಮೆಯಾದ ಐದು ದಿನಗಳ ಮೇಲೆ ಸೋಮವಾರ ಅಥವಾ ಶುಕ್ರವಾರದಂದು ಖಾಸಗಿಯಾಗಿ ಮನೆಗಳಲ್ಲಿ ಬೆಳಗ್ಗೆ ಮತ್ತು ಸಾರ್ವಜನಿಕವಾಗಿ ಸಾಯಂಕಾಲ ನಡೆಯುತ್ತದೆ. ಇದಕ್ಕೆ ಒಂದು ತಿಂಗಳ ಹಿಂದಿನಿಂದ ಅಂದರೆ ಹೋಳಿ ಹುಣ್ಣಿಮೆಯಿಂದ ಸಿದ್ಧತೆಗೆ ತೊಡಗಿರುತ್ತಾರೆ. ಮನೆಯಲ್ಲಿದ್ದು ಆಚರಿಸುವ ಹಬ್ಬವಾಗಿ ಮತ್ತು ಶ್ರೀಪರ್ವತದ ಮಲ್ಲಿಕಾರ್ಜುನನ ದರ್ಶನ ಮಾಡಿಕೊಂಡು ಬಂದವರು ಆಚರಿಸುವಂತ ಹಬ್ಬವೂ ಆಗಿ ಇದು ವಿಶೇಷತೆ ಪಡೆದಿದೆ. ಈ ಆಚರಣೆಯ ಹಿನ್ನೆಲೆಯನ್ನು ಅರಿವುದು ಮಹತ್ವದ್ದು.

ವಿಜಾಪುರ ಜಿಲ್ಲೆಗೆ ಶ್ರೀಶೈಲದೊಂದಿಗೆ ಭಾವನಾತ್ಮಕವಾಗಿ ನಿಕಟ ಸಂಬಂಧವಿದೆ. ಇಲ್ಲಿಯ ಅನೇಕರು ಶೈವ ಪಂಥಕ್ಕೆ ಸೇರಿದವರು. ಅದರಲ್ಲೂ ಲಾಕುಳ ಮತ್ತು ಪಾಶುಪತ ಶೈವಧಾರೆಯನ್ನು ಅನುಸರಿಸುವವರು. ಪರ್ವತದ ಮಲ್ಲಿಕಾರ್ಜುನ ಅನೇಕರ ಮನೆದೈವವೂ ಹೌದು. ವರ್ಷಕ್ಕೊಮ್ಮೆ ಮಲ್ಲಯ್ಯನ ಹೆಸರಿನಲ್ಲಿ ಕಂಬಿ ಐದೇಶಿಯನ್ನು ಆಚರಿಸುತ್ತಾರೆ. ಜತೆಗೆ ಶ್ರೀಶೈಲ ಪರ್ವತದ ಮಲ್ಲಯ್ಯನ ಸನ್ನಿಧಿಯಲ್ಲಿ ಆಚರಿಸಿ ಊರಿಗೆ ಬರುತ್ತಾರೆ. ಹೀಗೆ ಶ್ರೀಶೈಲಕ್ಕೆ ಹೋಗುವ ಭಕ್ತರ ಗುಂಪನ್ನು ಪರಿಷೆ ಪರ್ಸೆ ಎಂದು ಕರೆಯುತ್ತಾರೆ.

Scanned by CamScanner

**ಪರಿಷೆಯ ಪ್ರಾಚೀನ ಉಲ್ಲೇಖಗಳು:** ಶ್ರೀಶೈಲಕ್ಕೆ ಪರಿಷೆ ಹೋಗುವ ಈ ಕ್ರಮ ಪ್ರಾಚೀನವಾದುದು ಎನ್ನುವುದಕ್ಕೆ ನಮ್ಮ ಕಾವ್ಯಗಳಲ್ಲಿ ಉಲ್ಲೇಖಗಳಿವೆ. ರಾಘವಾಂಕನ ಸಿದ್ಧರಾಮ ಚಾರಿತ್ರ್ಯದಲ್ಲಿ ಮೊದಲ ಉಲ್ಲೇಖ ದೊರೆಯುತ್ತದೆ. ಅವನ ಮುಗ್ಧ ಭಕ್ತಿಗೆ ಮೆಚ್ಚಿದ ದೇವರು ಅವನಲ್ಲಿಗೆ ಬಂದು ಹಂಜಕ್ಕಿ ಬಾನ ಬೇಕೆಂದು ಕೇಳುತ್ತಾನೆ. ಅದನ್ನು ತರಲೆಂದು ಸಿದ್ಧರಾಮ ಮನೆಗೆ ಹೋಗಿ ಬರುವಷ್ಟರಲ್ಲಿಯೇ ಆ ವ್ಯಕ್ತಿ ಮಾಯವಾಗಿರುತ್ತಾನೆ. ಆತ ತನ್ನ ಹೆಸರನ್ನು ಮಲ್ಲಯ್ಯನೆಂದು ಹೇಳಿರುತ್ತಾನಾದ್ದರಿಂದ ಈ ಸಿದ್ಧರಾಮ ಮಲ್ಲಯ್ಯನನ್ನು ಕೂಗಿ ಕರೆಯುತ್ತಾನೆ. ಅವನು ಓಗೊಡದಿದ್ದಾಗ ಅಡವಿಯ ತುಂಬ ಹುಡುಕುತ್ತಾನೆ. ಆದರೂ ಸಿಗದಾಗ ಮಲ್ಲಯ್ಯ ಎಂದು ಕೂಗಿ ಅಳತೊಡಗುತ್ತಾನೆ. ಅದೇ ಮಾರ್ಗವಾಗಿ ಶ್ರೀಶೈಲಕ್ಕೆ ಹೋಗುತ್ತಿದ್ದ ಪರಿಷೆಯವರ ಕಣ್ಣಿಗೆ ಮಲ್ಲಯ್ಯನ ಹೆಸರು ಕೂಗಿ ಅಳುವ ಬಾಲಕ ಬೀಳುತ್ತಾನೆ. ಅವರು ಸಿದ್ಧರಾಮನಿಗೆ ಮಲ್ಲಯ್ಯನನ್ನು ತೋರಿಸುವುದಾಗಿ ಹೇಳಿ ಶ್ರೀಶೈಲಕ್ಕೆ ಕರೆದೊಯ್ಯುತ್ತಾರೆ. ಈ ಸನ್ನಿವೇಶವನ್ನು ರಾಘವಾಂಕ ಅತ್ಯಂತ ಸುಂದರವಾಗಿ ಸ್ವಾರಸ್ಯಕರವಾಗಿ ಚಿತ್ರಿಸಿದ್ದಾನೆ. ಇನ್ನೊಂದು ಗೊಲ್ಲಾಳನ ಚರಿತ್ರೆಯಲ್ಲೂ ಶ್ರೀಶೈಲಕ್ಕೆ ಹೋಗುವ ಪರಿಷೆಯ ವಿಷಯ ಬರುತ್ತದೆ. ಗೊಲ್ಲಾಳನು ತನ್ನ ಕುರಿ ಮೇಯಿಸುತ್ತಿರುವಾಗ ಅಪಾರವಾದ ನಿಧಿಯಿರುವುದು ಪತ್ತೆಯಾಗಿರುತ್ತದೆ. ಆದರೆ ಗೊಲ್ಲಾಳನಿಗೆ ಅದರಲ್ಲಿ ಆಸಕ್ತಿಯಿರಲಿಲ್ಲ. ಹೀಗೆ ದಿನನಿತ್ಯ ಕುರಿಮೇಯಿಸುತ್ತ ಶಿವಪೂಜಾ ನಿರತನೂ ಆಗಿರುತ್ತಾನೆ. ಇಂತದೊಂದು ದಿನ ಅವನ ಊರ ದಾರಿಯಾಗಿ ಮಲ್ಲಯ್ಯನ ಪರಿಷೆ ಶ್ರೀಶೈಲಕ್ಕೆ ಹೋಗುತ್ತಿರುತ್ತದೆ. ಅದರಲ್ಲಿ ಒಬ್ಬ ವೃದ್ಧ ಜಂಗಮ ಪಾದರಕ್ಷೆಗಳಿಲ್ಲದೆ ನಡೆದುಬರುತ್ತಿರುತ್ತಾನೆ. ಬಿಸಿಲ ಬೇಗೆಗೆ ಅವನ ಕಾಲು ಸುಟ್ಟುಹೋಗುತ್ತಿರುತ್ತವೆ. ಅದನ್ನು ಕಂಡ ಗೊಲ್ಲಾಳನಿಗೆ ಕನಿಕರ ಮೂಡಿ ತನಗೆ ಗೋಚರವಾಗಿದ್ದ ನಿಧಿಯಿಂದ ಒಂದಷ್ಟು ಹಣವನ್ನು ಪಾದರಕ್ಷೆ ಕೊಂಡುಕೊಳ್ಳುವಂತೆ ಹೇಳುತ್ತಾನೆ. ಶ್ರೀಶೈಲದಿಂದ ಬರುವಾಗ ತನಗೊಂದು ಲಿಂಗ ತರುವಂತೆ ಕೇಳುತ್ತಾನೆ. ಹೀಗೆ ಕಾವ್ಯಗಳಲ್ಲಿ ಪರಿಷೆಗಳ ಉಲ್ಲೇಖಗಳು ಬರುತ್ತವೆ. ಕಾವ್ಯಗಳ ನಾಯಕರು ಚಾರಿತ್ರಿಕ ವ್ಯಕ್ತಿಗಳಾಗಿದ್ದು ೧೧ ಮತ್ತು ೧೨ನೆಯ ಶತಮಾನಕ್ಕೆ ಸೇರಿದವರಾಗಿದ್ದಾರೆ. ಇದರ ಮೂಲಕ ತಿಳಿದು ಬರುವ ಸಂಗತಿಯೆಂದರೆ ೧೧–೧೨ನೆಯ ಶತಮಾನದ ಹೊತ್ತಿಗಾಗಲೇ ಪರ್ವತಕ್ಕೆ ಹೋಗುವ ಪರಿಷೆಯ ಸಂಪ್ರದಾಯವಿತ್ತು ಎನ್ನುವುದು. ಎಂಟೊಂಬತ್ತು ನೂರು ವರ್ಷಗಳಿಂದ ಈ ಪರಂಪರೆ ಹಾಗೆಯೇ ಉಳಿದು ಬಂದಿರುವುದಕ್ಕೆ ಕಂಬಿ ಐದೇಶಿ ಸಾಕ್ಷಿಯಾಗಿದೆ.

ಕಂಬಿ ಐದೇಶಿಯ ಆಚರಣೆಯುಲ್ಲಿ ಎರಡು ಭಾಗಗಳಿವೆ. ಒಂದನೆಯದು ಕರಬಿ ಹೋಗುವುದು ನಡೆಯುವ ಆಚರಣೆ. ಎರಡನೆಯದು ಪರಿಷೆಯಲ್ಲಿ ಹೋದವರು



ಮರಳಿ ಬಂದ ಮೇಲೆ ನಡೆಸುವ ಆಚರಣೆ. ಹೀಗೆ ಬಂದಮೇಲೆ ನಡೆಸುವ ಆಚರಣೆಯನ್ನೇ ಕಂಬಿ ಐದೇಶಿ ಎಂದು ಕರೆಯುತ್ತಾರೆ.

**ಕಂಬಿ ಹೊರಡುವ ದಿನದ ಆಚರಣೆ:** ಇದು ಸಾಮಾನ್ಯ ಮಾರ್ಚ್ ತಿಂಗಳ ಉತ್ತರಾರ್ಧದಿಂದ ಎಪ್ರಿಲ್ ತಿಂಗಳ ಪೂರ್ವಾರ್ಧದ ನಡುವೆ ಬರುವ ಒಂದು ತೇದಿ. ಹೋಳಿ ಹುಣ್ಣಿಮೆಯ ಗಡುವು. ಭಾರತೀಯ ಕಾಲಗಣನೆಯ ಪ್ರಕಾರ ಫಾಲ್ಗುಣ ಮಾಸದ ಬಹುಳ ಪಕ್ಷದ ದ್ವಿತೀಯೆಯಂದು ಪರಿಷೆ ಹೊರಟು ನಿಲ್ಲುತ್ತದೆ. ಹೋಳಿ ಹುಣ್ಣಿಮೆಯಂದುಕಾಮದಹನ, ಮರುದಿನ ಬೂದಿದಿನ. ಅದರ ಮರುದಿನ, ಬೇಟಿಯದಿನ ಅಂದೇ ಪರಿಷೆಗೆ ಹೊರಡಲು ಸಿದ್ಧವಾಗುತ್ತಾರೆ. ಕಂಬಿಗಳು ಆಯಾ ಊರಲ್ಲಿ ಐಗೋಳು ಅಥವಾ ಜಂಗಮರ ಮಠ ಅಥವಾ ಮನೆಗಳಲ್ಲಿರುತ್ತವೆ. ಅಂದು ಕಂಬಿಯನ್ನು ಹೊರ ತೆಗೆದು ಸ್ವಚ್ಛಗೊಳಿಸುತ್ತಾರೆ. ಅನಂತರ ಅದಕ್ಕೆ ಪೂಜೆ ಸಲ್ಲಿಸುತ್ತಾರೆ. ಆ ಊರುಗಳಲ್ಲಿ ಮಲ್ಲಯ್ಯನ ಭಕ್ತರ ಮನೆಗಳಿಗೆ ಪೂಜಿಸಿದ ಕಂಬಿಯನ್ನು ತೆಗೆದುಕೊಂಡು ಹೋಗುತ್ತಾರೆ.

ಭಕ್ತರ ಮನೆಯಲ್ಲಿ ಕಂಬಿಯನ್ನು ಪೂಜಿಸಿ ಆರತಿಯೆತ್ತಿ ನೆನೆಗಡಲೆ ಬೆಲ್ಲ ನೈವೇದ್ಯ ಮಾಡಿ ನೆರೆದ ಭಕ್ತ ಜನಕ್ಕೆ ಹಂಚುತ್ತಾರೆ. ಅನಂತರ ಸಂಜೆಯ ವೇಳೆಗೆ ಕಂಬಿಯನ್ನು ಊರಿನ ಶಿವದೇವಾಲಯ ಅಥವಾ ಶೈವ ಮಠಗಳಲ್ಲಿ ಸಾರ್ವಜನಿಕರಿಗಾಗಿ ಇಡುತ್ತಾರೆ. ಕಂಬಿಯನ್ನು ಹೊರುವ ಚಾಜ ಇರುವ ಗುರು/ಜಂಗಮರೆಂದು ಕರೆಸಿಕೊಳ್ಳುವ ಐಗೋಳು ಅವರೊಂದಿಗೆ ಆ ಊರಿನ ಭಕ್ತರು ಸೇರಿ ಅಂದು ಪ್ರಯಾಣ ಹೊರಡುತ್ತಾರೆ.

**ಕಂಬಿಯ ಸ್ವರೂಪ:** ಕಂಬಿಯು ಬಿದಿರ ಬೊಂಬುವಿನಿಂದ ಮಾಡಿದ್ದಾಗಿರುತ್ತದೆ. ಮೂರರಿಂದ ನಾಲ್ಕು ಅಡಿ ಉದ್ದದ ಬಿದಿರಗಳು ಅದನ್ನು ನೆಲದ ಮೇಲೆ ಅಡ್ಡಡ್ಡ ನಿಲ್ಲಿಸಲು ಮುಂಭಾಗದಲ್ಲಿ ಎರಡು ಕಾಲು ಹಾಗೂ ಹಿಂಭಾಗದಲ್ಲಿ ಎರಡೆರಡು ಕಾಲುಗಳಿರುತ್ತವೆ. ಮುಂತುದಿಗೆ ನಂದಿಯನ್ನು ಕೂರಿಸಿರುತ್ತಾರೆ. ಇದಿಷ್ಟೇ ಕಂಬಿಯ ಸ್ವರೂಪ. ಹರಿಹರ ಕವಿಯು ರಚಿಸಿದ ಬಸವರಾಜ ದೇವರ ರಗಳೆಯಲ್ಲಿ ಕಂಬಿಯ ಉಲ್ಲೇಖವಿದೆ. ಬಸವಣ್ಣ ಅಧ್ಯಯನಕ್ಕಾಗಿ ನೆಲೆ ನಿಂತಿದ್ದ ಕಪ್ಪಡಿ ಸಂಗಮದ ದೇವಾಲಯದಲ್ಲಿದ್ದ ಕಂಬಿಯನ್ನು ನದಿಗೆ ತೆಗೆದುಕೊಂಡು ಹೋಗಿ ಪೂಜೆಗೆ ನೀರು ತರುತ್ತಿದ್ದುದಾಗಿ ಹರಿಹರ ವರ್ಣಿಸುತ್ತಾನೆ. ಇಂತಹ ಕಂಬಿಯನ್ನು ಹೊತ್ತ ಗುರುವರ್ಗದವರು ಮುಂದಾಗಿ ಭಕ್ತರ ಪರಿಶೆ ಶ್ರೀಶೈಲಕ್ಕೆ ಹೊರಡುತ್ತಾರೆ. ನಡೆದು ಹೋಗುವುದೇ ಹೆಚ್ಚು. ಇದು ಒಂದು ತಿಂಗಳ ಅವಧಿಯ ಪ್ರಯಾಣ. ಹೋಗಲು ಹದಿನೈದು ದಿನ ಬರಲು ಹದಿನೈದು ದಿನ, ನಡುವೆ ಶ್ರೀಶೈಲದಲ್ಲಿ ಒಂದೆರಡು ದಿನಗಳು ಕಳೆದು ಊರಿಗೆ ಮರಳುತ್ತಾರೆ. ನಡೆದು ಹೊರಟ ಭಕ್ತರಿಗೆ ಯುಗಾದಿ ಹಬ್ಬದ ಹೊತ್ತಿಗೆ ಮಲ್ಲಿಕಾರ್ಜುನನ ಸನ್ನಿಧಿ ಸೇರುವ ಗುರಿಯಿರುತ್ತದೆ. ದಿನವೂ ಬೆಳಗಿನ

Scanned by CamScanner

ಜಾವ ನಾಲ್ಕು ಗಂಟೆಯಿಂದ ನಡೆಯಲಾರಂಭಿಸಿ ಬಿಸಿಲೇರುವ ಹೊತ್ತಿಗೆ ನೀರು ನೆರಳು ಇರುವ ಪ್ರದೇಶ ಸೇರುತ್ತಾರೆ. ಅಲ್ಲಿ ಸ್ನಾನ ಊಟ ಪೂರೈಸಿ ಸ್ವಲ್ಪ ಹೊತ್ತು ವಿಶ್ರಮಿಸಿ ಬಿಸಿಲಿಳಿದ ಮೇಲೆ ಅಂದರೆ ಸಂಜೆ ಐದು ಗಂಟೆಯ ಹೊತ್ತಿಗೆ ಮತ್ತೆ ಪ್ರಯಾಣ ಹೊರಡುತ್ತಾರೆ.

ಬೆಳದಿಂಗಳಿರುವುದರಿಂದ ತಡರಾತ್ರಿಯವರೆಗೆ ನಡೆದು ಮತ್ತೆ ಸುರಕ್ಷಿತ ತಾಣ ಸೇರುತ್ತಾರೆ. ಅಲ್ಲಿ ಊಟಮುಗಿಸಿ ವಿರಮಿಸಿ ಕೊಳ್ಳುತ್ತಾರೆ, ತಾವಿಳಿದ ತಾಣದಲ್ಲಿಯೇ ಒಲೆಹೂಡಿ ಅಡಿಗೆ ಮಾಡಿ ಊಟ ಮಾಡುತ್ತಾರೆ. ಹೀಗೆ ಪರ್ವತಕ್ಕೆ ಹೊರಟ ಪರಷೆಯ ಭಕ್ತರನ್ನು ಉಪಚರಿಸಲು ಅಲ್ಲಲ್ಲಿಯೇ ಕೆಲವರು ಸಿದ್ಧರಾಗುತ್ತಾರೆ. ಈ ಭಕ್ತರ ಸೇವೆಯೆಂದರೆ ಮಲ್ಲಿಕಾರ್ಜುನ ಸೇವೆ ಎಂದೇ ನಂಬಿಕೆಯಿವರದು. ಯಾತ್ರಿಕರಿಗೆ ದಾಸೋಹದ ವ್ಯವಸ್ಥೆ ಮಾಡುವುದಷ್ಟೇ ಅಲ್ಲ. ಯಾತ್ರಿಕರೊಂದಿಗೆ ಸಣ್ಣಮಕ್ಕಳಿದ್ದರೆ, ಆ ಮಕ್ಕಳ ನೆತ್ತಿಗೆ ಎಣ್ಣೆ ಉಣಿಸಿ ಎರೆಯಲು ಬಿಸಿನೀರು ಕಾಯಿಸಿ ತಾವೇ ಮುಂದಾಗಿ ಮಕ್ಕಳನ್ನು ಎರೆಯುತ್ತಾರೆ. ಹೀಗೆ ಬಹುವಿಧದ ಉಪಚಾರ ಮಾಡುವ ಜನರಿರುವುದನ್ನು ಯಾತ್ರೆ ಮಾಡಿಬಂದವರು ಹೇಳುತ್ತಾರೆ.

ಹೆಣ್ಣು ಗಂಡು ಎಂಬ ಭೇದವಿಲ್ಲದೆ ಎಲ್ಲರೂ ಕೈಯ್ಯಲ್ಲೊಂದು ಬಿದಿರಬೆತ್ತ ಬಟ್ಟೆಗಂಟು ಬುತ್ತಿಚೀಲ ಹಿಡಿದು ಹೊರಡುತ್ತಾರೆ. ದಾರಿಯಲ್ಲಿ ಅಡಿಗೆ ಮಾಡಲು ಬೇಕಿರುವ ಪರಿಕರಗಳನ್ನು ಒಂದು ವಾಹನದಲ್ಲಿ ಕಳಿಸುತ್ತಾರೆ.

ಶ್ರೀಶೈಲದ ದಾರಿ ದುರ್ಗಮವಾದುದು. ಕಾಡು ಕಡಿದಾದ ಬೆಟ್ಟ ಆಳವಾದ ಕಣಿವೆ ಇವೆಲ್ಲವನ್ನೂ ಹಾದು ಶ್ರೀಶೈಲಕ್ಕೆ ಹೋಗಬೇಕು. ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಕಡಿದಾದ ಬೆಟ್ಟವನ್ನೇರಲು ಆಸರೆಯಾಗಿ ಮುಳ್ಳುಕಂಟಿಗಳನ್ನು ಸವರಿ ದಾರಿಮಾಡಿಕೊಳ್ಳಲು ಹೀಗೆ ಕೈಯ್ಯಲ್ಲಿನ ಬೆತ್ತದ ಕೋಲು ಬಹೂಪಯೋಗಿಯಾಗಿರುತ್ತದೆ. ಇದರ ಸಹಾಯದಿಂದ ದಾರಿಶ್ರಮಿಸಿ ಯುಗಾದಿ ಅಮಾವಾಸ್ಯೆಯ ಹೊತ್ತಿಗೆ ಶ್ರೀಶೈಲ ಸೇರುತ್ತಾರೆ. ಮರುದಿನ ಯುಗಾದಿ ಹಬ್ಬ. ಅಂದು ಮಲ್ಲಯ್ಯನ ದರ್ಶನಮಾಡಿ ಬೇವು ಕಚ್ಚುತ್ತಾರೆ. ಬೇವು ಕಚ್ಚುವುದೇ ಮುಖ್ಯ ಆಚರಣೆ. ಅಂದು ಅಲ್ಲಿಯೇ ಪ್ರಸಾದ ಸ್ವೀಕರಿಸಿ ಮರುದಿನ ಮತ್ತೆ ಮರಳಿ ಪ್ರಯಾಣ ಹೊರಡುತ್ತಾರೆ. ಮರಳಿ ಬರುವ ದಾರಿ ಬೇರೆ. ಪಾತಾಳಗಂಗೆ ಮಹಾನಂದಿ ಮುಂತಾದ ದರ್ಶನೀಯ ಸ್ಥಳಗಳನ್ನು ಸಂದರ್ಶಿಸಿ ಮರಳಿ ಊರಿಗೆ ಹೊರಟರೆ ಬಂದು ಸೇರುವುದು, ದವನದ ಹುಣ್ಣಿಮೆಯ ಹೊತ್ತಿಗೆ. ಹೀಗೆ ಯಾತ್ರೆಯಿಂದ ಬಂದವರು ನೇರವಾಗಿ ಮನೆಗೆ ಹೋಗುವುದಿಲ್ಲ. ಊರ ಶಿವದೇವಾಲಯ ಅಥವಾ ಮಠಗಳಲ್ಲಿ ಉಳಿದುಕೊಳ್ಳುತ್ತಾರೆ. ಮಲ್ಲಯ್ಯನನ್ನು ಮನೆಯೊಳಗೆ ಕರೆದುಕೊಳ್ಳುವುದಕ್ಕೆ ಹುಣ್ಣಿಮೆಯಾದ ಮೇಲೆ ಬರುವ ಸೋಮವಾರ ಅಥವಾ ಗುರುವಾರವನ್ನು



ನಿಗದಿಪಡಿಸುತ್ತಾರೆ. ಹೀಗೆ ಮನೆಯೊಳಗೆ ಬಂದಮೇಲೆ ಐದನೆಯ ದಿವಸಕ್ಕೆ ಸೋಮವಾರ ಅಥವಾ ಶುಕ್ರವಾರದಂದು ಐದೇಶಿ ಆಚರಣೆ ಇರುತ್ತದೆ.

**ಐದೇಶಿ ಆಚರಣೆ:** ಈಗಾಗಲೇ ತಿಳಿಸಿದಂತೆ ದೇವರನ್ನು ಮನೆಗೆ ಸೇರಿಸಿದ ಐದನೆಯ ದಿನಕ್ಕೆ ಐದೇಶಿ ಆಚರಣೆ ನಡೆಯುತ್ತದೆ. ಯಾತ್ರೆ ಹೋದವರು ಬರುವಾಗ ತಮ್ಮೊಂದಿಗೆ ಶ್ರೀಶೈಲದಲ್ಲಿ ದೊರೆಯುವ ವಿಶೇಷವಸ್ತುಗಳನ್ನು ತಂದು ತಮ್ಮ ಬಂಧುಗಳಿಗೆ ಹತ್ತಿರದವರಿಗೆ ಅವುಗಳನ್ನು ಹಂಚುತ್ತಾರೆ. ಅಲ್ಲಿಂದ ತರುವ ವಸ್ತುಗಳಲ್ಲಿ ಬಿದಿರಿನಿಂದ ಮಾಡಿದವುಗಳೇ ಹೆಚ್ಚಾಗಿರುತ್ತವೆ. ಬಿದಿರಬೆತ್ತ ಬಿದಿರಿನಿಂದ ಮಾಡಿದ ಕೇರುವ ಮೊರ ಮತ್ತು ಬುಟ್ಟಿ ಇವುಗಳೊಂದಿಗೆ ಅಲ್ಲಿ ಸಿಗುವ ಸಣ್ಣಸಣ್ಣ ಬೆಲ್ಲದಚ್ಚು, ಇಪ್ಪೆಹೂವು ಗಂಧದ ಉಂಟೆ ಕಾಶೀದಾರ, ಶ್ರೀಶೈಲದ ಕುಂಕುಮ ಮತ್ತು ಬಳೆ. ಇವೆಲ್ಲವನ್ನೂ ಹಂಚುತ್ತಾರೆ. ಯಾತ್ರೆ ಹೋಗಿ ಬಂದ ಮನೆಯವರು ಎಲ್ಲ ವಸ್ತುಗಳನ್ನಿಟ್ಟು ಪೂಜೆ ಮಾಡುತ್ತಾರೆ. ಹೆಣ್ಣುಮಕ್ಕಳು ಯಾತ್ರೆಗೆ ಹೋಗಿ ಬಂದರೆ ಭ್ರಮರಾಂಬ ಪೂಜೆಯನ್ನು ಮಾಡಲಾಗುತ್ತದೆ. ಅನಂತರ ಊರಿನಲ್ಲಿರುವ ಮಠದಯ್ಯಗಳನ್ನು ಮನೆಗೆ ಕರೆದು ಪಾದಪೂಜೆ ಮಾಡಿ ಪಾದೋದಕ ತೆಗೆದುಕೊಳ್ಳುತ್ತಾರೆ. ಹಬ್ಬಕ್ಕಾಗಿ ಹುಗ್ಗಿ ಹೋಳಿಗೆಯ ಅಡುಗೆಯಿರುತ್ತದೆ. ಸ್ವಾಮೀಜಿಗೆ ಊಟ ಮಾಡಿಸುತ್ತಾರೆ.

**ಭ್ರಮರಾಂಬಿಕೆಯ ಪೂಜೆ:** ಹೊಸದಾಗಿ ತಂದ ಮೊರದಲ್ಲಿ ಗಂಧದ ಉಂಡೆ, ಕಾಶೀದಾರ ಕುಂಕುಮ ಬಳೆ ಇಪ್ಪೆಹೂವು ಎಲ್ಲವನ್ನೂ ಇಟ್ಟು ಪೂಜಿಸುತ್ತಾರೆ. ಮುತ್ತೈದೆಯರನ್ನು ಕರೆದು ಅವರ ಉಡಿತುಂಬಿ ಊಟ ಮಾಡಿಸುತ್ತಾರೆ. ಇದೆಲ್ಲ ಮುಗಿದ ಮೇಲೆ ಯಾತ್ರೆ ಹೋಗಿ ಬಂದ ಭಕ್ತರಿಗೆ ಬಂಧುಬಳಗದವರು, ನೆಂಟರಿಷ್ಟರು ಹೊಸಬಟ್ಟೆ ತಂದು ಉಡುಗೊರೆ ಕೊಡುತ್ತಾರೆ. ಸುದೀರ್ಘವಾದ ಹಾಗೂ ದುರ್ಗಮವಾದ ಈ ಯಾತ್ರೆಯಲ್ಲಿ ಪ್ರಾಣಾಪಾಯವಾಗುವ ಸಂಭವನೀಯತೆ ಹೆಚ್ಚು, ಕಾಡುಪ್ರಾಣಿಗಳಿಂದ ಅಪಾಯ ಅಡವಿಚೊಂಚರೆಂಬ ಕಾಡುಗಳ್ಳರಿಂದಲೂ ಅಪಾಯ. ಅದರೊಂದಿಗೆ ಕಡಿದಾದ ಬೆಟ್ಟವೇರುವಾಗ ಕಾಲುಜಾರಿ ಪ್ರಪಾತಕ್ಕೆ ಬೀಳುವ ಸಂಭವ ಇವೆಲ್ಲದರಿಂದ ಪಾರಾಗಿ ಬಂದವರು ಪುನರ್ಜನ್ಮ ಪಡೆದಂತೆಯೇ ಸರಿ ಎನ್ನುವ ಮನೋಭಾವ. ಹೀಗೆ ಮರಳಿ ಬಂದವರನ್ನು ಸ್ವಾಗತಿಸಿ ಸಂತೋಷ ಪಡುವುದಲ್ಲದೆ ಅವರಿಗೆ ಉಡುಗೊರೆಗಳನ್ನು ನೀಡುತ್ತಾರೆ. ಅಲ್ಲದೆ ಹಿರಿಕಿರಿಯರೆನ್ನದೆ ಎಲ್ಲರೂ ಅವರ ಪಾದಮುಟ್ಟಿ ನಮಸ್ಕರಿಸಿ ಗೌರವಸಲ್ಲಿಸುತ್ತಾರೆ. ಹೀಗೆ ಮನೆಮನೆಗಳಲ್ಲಿನ ಆಚರಣೆ ನಡೆಯುತ್ತದೆ. ಅಂದೇ ಸಾಯಂಕಾಲ ಸಾರ್ವಜನಿಕವಾದ ಆಚರಣೆಯೂ ಇರುತ್ತದೆ. ಸಾರ್ವಜನಿಕ ಸಮಾರಂಭದಲ್ಲಿ ಬೆಲ್ಲ ಹಂಚುವ ಕಾರ್ಯಕ್ರಮವೇ ಪ್ರಧಾನ. ಸಾರ್ವಜನಿಕ ಸಮಾರಂಭ ಮತ್ತೆ ಊರ ದೇವಸ್ಥಾನದ ಬಯಲಲ್ಲಿ ಅಥವಾ ಮಠಗಳಲ್ಲಿ ನಡೆಯುತ್ತದೆ. ಎಲ್ಲರೂ ಸೇರಿ ಪರಸ್ಪರ ಬೆಲ್ಲ ಹಂಚುತ್ತಾರೆ. ಉಳ್ಳವರು ಮುದ್ದಿಸಕ್ಕರೆ ಹಂಚುತ್ತಾರೆ. ಹೀಗೆ ಬೆಲ್ಲ

Scanned by CamScanner

ಸಂಚಾರದ ಕಾರ್ಯಕ್ರಮ ಒಂದು ರೀತಿಯಲ್ಲಿ ಭಾವನಾತ್ಮಕ ಒಂದಾಗುವಿಕೆಗೂ ಕೂಡ ಕಾರಣವಾಗುತ್ತದೆ. ಇಲ್ಲಿಗೆ ಕಂಡ ಜನರಿಂದ ಆಚರಣೆ ಮುಕ್ತಾಯವಾಗುತ್ತದೆ.

ಒಟ್ಟಾರೆ ಹೇಳುವುದಾದರೆ ಕೃಷಿ ಮತ್ತು ಪಶುಪಾಲನೆಯಲ್ಲಿ ತೊಡಗಿರುವ ಜನರೇ ಈ ಆಚರಣೆಯಲ್ಲಿ ತೊಡಗಿಕೊಳ್ಳುತ್ತಾರೆ. ಹೋಳಿಹುಣ್ಣಿಮೆಯ ಹೊತ್ತಿಗೆ ಸುಗ್ಗಿ ಮುಗಿದು ಕಾಳುಕಡಿ ಮನೆಯಲ್ಲಿ ಸಂಗ್ರಹವಾಗಿರುತ್ತದೆ. ಪಶುಗಳಿಗೆ ಮೇವಿನ ಸಂಗ್ರಹವೂ ಇರುತ್ತದೆ. ಹೊಲದಲ್ಲಿ ಕೆಲಸವೇನೂ ಇರುವುದಿಲ್ಲ. ಬಿಡುವಿನ ವೇಳೆಯಲ್ಲಿ ಯಾತ್ರೆ ಹೊರಡುತ್ತಾರೆ. ಮರಳಿ ಬರುವ ಹೊತ್ತಿಗೆ ಬೇಸಿಗೆಯ ಪ್ರಖರತೆ ಹೆಚ್ಚಾಗಿರುತ್ತದೆ. ಸ್ವಲ್ಪದಿನ ಸುಧಾರಿಸಿಕೊಳ್ಳುವಷ್ಟರಲ್ಲಿ ಮುಂಗಾರು ಮಳೆ ಪ್ರಾರಂಭವಾಗಿ ಹೊಲದ ಕೆಲಸಗಳು ಪ್ರಾರಂಭವಾಗುತ್ತವೆ. ಶ್ರೀಶೈಲದಿಂದ ತರುವ ಬೆತ್ತದ ಕೋಲು ಪಶುಸಂರಕ್ಷಣೆಗಾಗಿಯೇ ತೆನೆಗಳಿಂದ ಕಾಳು ಬೇರ್ಪಡಿಸಲು ತೆನೆಗಳ ಮೇಲೆ ಬಡಿಯಲು ಒಳ್ಳೆಯ ಉಪಕರಣವಾಗುತ್ತದೆ. ಪಶುಗಳನ್ನು ನಿಯಂತ್ರಿಸಲು ಕೋಲು ಸಹಾಯಕವಾಗುತ್ತದೆ. ಕಾಳು ತೂರಿ ಜೊಳ್ಳು ಮತ್ತು ಕಾಳನ್ನು ಬೇರ್ಪಡಿಸಲು ಮೊರ ಬುಟ್ಟಿಗಳು ಸಹಾಯಕವಾಗುತ್ತವೆ. ಕೃಷಿ ಸಂಬಂಧಿ ಉಪಕರಣಗಳು ದೊರೆಯುವ ಕಾರಣಕ್ಕೆ ಅಲ್ಲಿಗೆ ಹೋಗುತ್ತಿದ್ದಿರಬಹುದು.

ಲಕುಳ ಅಥವಾ ಪಾಶುಪತ ಶೈವರ ಕೇಂದ್ರವಾಗಿಯೂ ಶ್ರೀಶೈಲ ಪ್ರಸಿದ್ಧವಾಗಿದೆ. ಶೈವ ಅನುಯಾಯಿಗಳು ತಮ್ಮ ಭಕ್ತಿಗೌರವ ಸಮರ್ಪಣೆಗಾಗಿ ಶ್ರೀಶೈಲಕ್ಕೆ ಹೋಗುತ್ತಿರಬಹುದು. ಆದರೆ ಧಾರ್ಮಿಕ ಉದ್ದೇಶಕ್ಕಿಂತ ಲೌಕಿಕ ಉದ್ದೇಶವೇ ಇಲ್ಲಿ ಮುಖ್ಯವೆನಿಸುತ್ತದೆ. ತಮ್ಮ ಕೃಷಿ ಉದ್ಯಮಕ್ಕೆ ಬೇಕಾಗುವ ಸಾಮಾನುಗಳು ಉತ್ತಮ ಗುಣಮಟ್ಟದವು ಕಡಿಮೆ ಬೆಲೆಯಲ್ಲಿ ದೊರೆಯುವ ಈ ತಾಣಕ್ಕೆ ಪ್ರತಿವರ್ಷವೂ ಹೋಗುತ್ತಿದ್ದಿರಬಹುದು.

ಇಂದು ಯಾತ್ರೆಯ ಸ್ವರೂಪದಲ್ಲಿ ಬದಲಾವಣೆಗಳಾಗಿವೆ. ಸಂಪರ್ಕ ಸಾರಿಗೆ ವ್ಯವಸ್ಥೆಯಲ್ಲಿ ಆದ ಬದಲಾವಣೆಗಳು ಇದಕ್ಕೆ ಕಾರಣ. ವಾಹನಗಳು ಸರಿಯಾದ ರಸ್ತೆಗಳು ಇರುವುದರಿಂದ ಈಗ ಪ್ರಯಾಣಕ್ಕೆ ದೀರ್ಘಕಾಲ ಬೇಕಿಲ್ಲ ಮತ್ತು ವರ್ಷದ ಯಾವ ತಿಂಗಳಲ್ಲಿ ಬೇಕಾದರೂ ಹೋಗಬಹುದು. ಇಂದು ಅದು ಕೇವಲ ಧಾರ್ಮಿಕ ಶ್ರದ್ಧೆಯ ಕೇಂದ್ರವಾಗಿ ಮಾತ್ರ ಉಳಿದಿದೆ. ಇನ್ನು ಕೆಲವರು ಪ್ರವಾಸದ ಮೋಜಿಗಾಗಿಯೂ ಅಲ್ಲಿಗೆ ಹೋಗುತ್ತಲಿರುತ್ತಾರೆ. ಆದರೂ ವಿಜಾಪುರ ಮತ್ತು ಬಾಗಲಕೋಟೆಯಲ್ಲಿ ಹಳ್ಳಿಹಳ್ಳಿಗಳಿಂದಲೂ ನಡೆದು ಶ್ರೀಶೈಲಕ್ಕೆ ಯಾತ್ರೆ ಹೋಗುವ ರೂಢಿ ಇಂದಿಗೂ ಇದೆ. ಅಲ್ಲದೆ ಇತ್ತೀಚೆಗೆ ಹೀಗೆ ನಡೆದು ಹೋಗುವವರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಹೋಗುವಾಗ ನಡೆದುಕೊಂಡು ಹೋಗಿ ಮರಳಿ ವಾಹನಗಳಲ್ಲಿ ಊರಿಗೆ ಬರುವವರೂ ಇದ್ದಾರೆ. ಇನ್ನು ಕೆಲವರು ಕಡೆಬಾಗಿಲವರೆಗೆ ವಾಹನಗಳಲ್ಲಿ ಹೋಗಿ ಕಡೆಬಾಗಿಲಿನಿಂದ



ಶ್ರೀಶೈಲಕ್ಕೆ ಹನ್ನೆರಡು ಹರದಾರಿ ದೂರ ನಡೆಯುತ್ತಾರೆ. ಹನ್ನೆರಡು ಹರದಾರಿ ಎಂದರೆ ಅಂದಾಜು ಅರವತ್ತು ಕಿಲೋಮೀಟರಿನ ದಾರಿ. ಈ ದಾರಿ ಕ್ರಮಿಸಲು ಮೂರು ದಿನಗಳು ಬೇಕು. ಹೀಗೆ ಕಷ್ಟ ಹನ್ನೆರಡು ಹರದಾರಿಯಾದರೂ ನಡೆಯುವ ಸಂಕಲ್ಪದಿಂದ ಕೆಲವರು ಹೋಗುತ್ತಾರೆ. ಹೀಗೆ ಯಾತ್ರೆ ಹೋಗಿ ಬಂದವರು ಹೊಸ ಉತ್ಸಾಹದಿಂದ ಮತ್ತೆ ತಮ್ಮ ದಿನನಿತ್ಯದ ಕೆಲಸಗಳಿಗೆ ತೊಡಗಿಕೊಳ್ಳುತ್ತಾರೆ. ಆ ದೃಷ್ಟಿಯಿಂದ ಈ ಯಾತ್ರೆ ಒಂದು ರೀತಿಯಲ್ಲಿ Refreshing ಕೂಡ ಆಗಿದೆಯೆಂದರೆ ತಪ್ಪಾಗದು. ❑

Scanned by CamScanner